# <u>ಕಿರು ಪರಿಚಯ</u>

**ಪ್ರೊ ಜಿ. ಹೇಮಂತ ಕುಮಾರ್**
ಕುಲಪತಿಗಳು
ಮೈಸೂರು ವಿಶ್ವವಿದ್ಯಾನಿಲಯ

ಪ್ರೊ. ಜಿ. ಹೇಮಂತ ಕುಮಾರ್ ರವರು ಮೇ 21, 1959 ರಂದು ಮೈಸೂರಿನಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಅವರು ಬಿ.ಎಸ್‌ಸಿ., ಬಿ.ಎಡ್., ಎಂಎಸ್ಸಿ., ಪಿಎಚ್.ಡಿ. ಪದವಿಯನ್ನು ಗಳಿಸಿದ್ದಾರೆ.

ಪ್ರೊ. ಜಿ. ಹೇಮಂತ ಕುಮಾರ್ ಅವರು ಸುಮಾರು 336ಕ್ಕೂ ಹೆಚ್ಚು ಸಂಶೋಧನಾ ಪತ್ರಿಕೆಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪೀರ್ ನಿಯತಕಾಲಿಕೆಗಳನ್ನು ವಿಮರ್ಶಿಸಿ ಪ್ರಕಟಿಸಿದ್ದಾರೆ ಮತ್ತು ಸುಮಾರು 150ಕ್ಕೂ ಹೆಚ್ಚು ಸಂಶೋಧನ ಪ್ರಬಂಧಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಸ್ತುತ ಪಡಿಸಿದ್ದಾರೆ. ಶ್ರೀಯುತರು ಸುಮಾರು 1442ಕ್ಕೂ ಹೆಚ್ಚು ವೈಜ್ಞಾನಿಕ ಉಲ್ಲೇಖಗಳನ್ನು ಹಾಗೂ ಹೆಚ್–ಇಂಡೆಕ್ಸ್ 21 ನ್ನು ಸಂಶೋಧನಾ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಪ್ರೊ. ಹೇಮಂತ ಕುಮಾರ್ ಅವರು ಆಹ್ವಾನಿತ ಮತ್ತು ಸಮಗ್ರ ಉಪನ್ಯಾಸಗಳನ್ನು ರಾಷ್ಟ್ರೀಯ/ಅಂತಾರಾಷ್ಟ್ರೀಯ ಸಭೆ ಮತ್ತು ಸಮ್ಮೇಳನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೀಡಿದ್ದಾರೆ. ಪ್ರೊ. ಜಿ. ಹೇಮಂತ ಕುಮಾರ್‌ರವರ ಮಾರ್ಗದರ್ಶನದಲ್ಲಿ ಈಗಾಗಲೇ 20 ವಿದ್ಯಾರ್ಥಿಗಳು ಪಿಎಚ್.ಡಿ. ಪದವಿಯನ್ನು ಪಡೆದಿದ್ದು, ಪ್ರಸ್ತುತ 08 ವಿದ್ಯಾರ್ಥಿಗಳು ಸಂಶೋಧನೆಯನ್ನು ನಡೆಸುತ್ತಿದ್ದಾರೆ. **DST, AICTE, UGC** ಮತ್ತು **DIETY** ಮುಂತಾದ ಪ್ರಮುಖ ಸಂಶೋಧನಾ ಸಂಸ್ಥೆಗಳಿಂದ ಪ್ರೊ. ಜಿ. ಹೇಮಂತ ಕುಮಾರ್‌ರವರು ಸಂಶೋಧನಾ ಯೋಜನೆಗಳನ್ನು ಪಡೆದಿರುತ್ತಾರೆ. ರೂ. ಐದು ಕೋಟಿಗಿಂತ ಹೆಚ್ಚು ಹಣವನ್ನು ಅಂತಾರಾಷ್ಟ್ರೀಯ ಸಹಭಾಗಿತ್ವದ ಸಂಶೋಧನಾ ಯೋಜನೆಗಳಿಂದ ಪಡೆದಿರುತ್ತಾರೆ. ಇವರು

ವೈಜ್ಞಾನಿಕ ಸಂಘ–ಸಂಸ್ಥೆಗಳ ಸದಸ್ಯರಾಗಿದ್ದು ಅವುಗಳಲ್ಲಿ ಪ್ರಮುಖವಾದವು : ಇಂಡಿಯನ್ ಸೊಸೈಟಿ ಫಾರ್ ಟೆಕ್ನಿಕಲ್ ಎಜುಕೇಷನ್ (**ISTE**), ಕಂಪ್ಯೂಟರ್ ಸೊಸೈಟಿ ಆಫ್ ಇಂಡಿಯಾ (**CSI**), ಭಾರತೀಯ ವಿಜ್ಞಾನ ಕಾಂಗ್ರೆಸ್ ಮತ್ತು **IAPR** –ಗಳಲ್ಲಿ ಆಜೀವ ಸದಸ್ಯರಾಗಿದ್ದಾರೆ .

ಪ್ರೊ. ಜಿ. ಹೇಮಂತ ಕುಮಾರ್ ಅವರು ಹಲವಾರು ಕಾರ್ಯಾಗಾರಗಳನ್ನು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸಮ್ಮೇಳನಗಳನ್ನು ಆಯೋಜಿಸಿರುತ್ತಾರೆ. ಶ್ರೀಯುತರ ಶೈಕ್ಷಣಿಕ ಶ್ರೇಷ್ಠತೆಯನ್ನು ಗುರುತಿಸಿ ಅವರಿಗೆ **ಮಿಲೇನಿಯಮ್ ಪ್ಲೇಕ್ಸ್ ಹಾನರ್** (**Millennium Plaques Honor**) ಪ್ರಶಸ್ತಿಯನ್ನು (ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ನೀಡುವಂತಹ ಪ್ರಧಾನಮಂತ್ರಿಗಳ ಪ್ರಶಸ್ತಿ) 2018ರಲ್ಲಿ ನಡೆದ ಭಾರತೀಯ ವಿಜ್ಞಾನ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರದಾನಿಸಲಾಗಿದೆ. ಶ್ರೀಯುತರು ಉಪಾಧ್ಯಾಯ ಮೂಡುಬಿಲ್ಲೆ ಆರ್ಟ್ ಫೌಂಡೇಷನ್, ಉಡುಪಿರವರ **ಉಪಾಧ್ಯಾಯ ಸಮ್ಮಾನ್ ರಾಜ್ಯಮಟ್ಟದ ಪ್ರಶಸ್ತಿ (2017),** ಲಯನ್ಸ್ ರೋಟರಿ ಕ್ಲಬ್, ಮೈಸೂರು ರವರು ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ 2017ರ **'ಅತ್ಯುತ್ತಮ ಶಿಕ್ಷಕ'** ಪ್ರಶಸ್ತಿಗೆ ಭಾಜನರಾಗಿರುತ್ತಾರೆ,

ಪ್ರೊ. ಜಿ. ಹೇಮಂತ ಕುಮಾರ್ ಅವರು ಚೀನಾ ದೇಶದ ಹುಂಗ್ಯೆ ವಿಶ್ವವಿದ್ಯಾಲಯದೊಡನೆ, ಚೀನಾ ಮತ್ತು ಮೈಸೂರು ವಿಶ್ವವಿದ್ಯಾನಿಲಯದೊಂದಿಗಿನ ಒಡಂಬಡಿಕೆಯ ಜಂಟಿ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಿ ಮತ್ತು ಚಾಲನೆಗೆ ತರುವಲ್ಲಿ ಯಶಸ್ವಿಯಾಗಿ ಈ ನಿಟ್ಟಿನಲ್ಲಿ ಈಗಾಗಲೇ ರೂ. 10.00 ಕೋಟಿ ನಿಧಿಯನ್ನು ಸಂಗ್ರಹಿಸಿದ್ದಾರೆ. ಯುರೋಪಿಯನ್ ಕಮೀಷನ್ ಆಫ್ ಎಜುಕೇಷನ್ (**Indo-European Project**)ನ ಶೈಕ್ಷಣಿಕ ಸಹಯೋಗದೊಂದಿಗೆ ನೆಟವರ್ಕ್ ಸಂಶೋಧನಾ ಯೋಜನೆಗಾಗಿ ಭಾರತ ಮತ್ತು ಹೊರ ರಾಷ್ಟ್ರಗಳ ಆರು ಪ್ರಧಾನ ಸಂಸ್ಥೆಗಳ ಜೊತೆಯಾಗಿ ಮಾಡರ್ನೈಸಿಂಗ್ ಅಂಡ್ ಎನ್‌ಹ್ಯಾನ್ಸಿಂಗ್ ಇಂಡಿಯನ್ ಇ–ಲರ್ನಿಂಗ್ ಎಜುಕೇಷನಲ್ ಸ್ಟ್ರಾಟಜೀಸ್ (**MILES**)ಅನ್ನು ಆಧುನೀಕರಿಸಿದ್ದಾರೆ. ಯುನಿವರ್ಸಿಟಿ ಆಫ್ ಬಾರ್ಸಿಲೋನಾ, ಎನ್‌ಹ್ಯಾನ್ಸಿಂಗ್ ಕ್ವಾಲಿಟಿ ಅಸ್ಸೂರೆನ್ಸ್ ಮ್ಯಾನೇಜ್‌ಮೆಂಟ್ ಮತ್ತು ಬೆಂಚ್‌ಮಾರ್ಕಿಂಗ್ ಸ್ಟ್ರಾಟಜೀಸ್ ಇನ್ ಇಂಡಿಯನ್ ಯುನಿವರ್ಸಿಟೀಸ್ (**EQUAM-BI**) ಸಂಸ್ಥೆಗಳ ಸಂಶೋಧನಾ ಸಹಭಾಗಿತ್ವವನ್ನು ಹೊಂದಿದ್ದಾರೆ.

ಪ್ರೊ. ಜಿ. ಹೇಮಂತ ಕುಮಾರ್ ಅವರು ಕುಲಪತಿಗಳಾಗುವ ಪೂರ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ಸ್ಥಾನಗಳಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ಗಣಗವಿಜ್ಞಾನ ಅಧ್ಯಯನ

ವಿಭಾಗದ ಅಧ್ಯಕ್ಷರಾಗಿ ಸುದೀರ್ಘವಾಗಿ ಒಂಬತ್ತು ವರ್ಷಗಳ ಸೇವೆ, 2009 ರಿಂದ ವಿಜ್ಞಾನ ಭವನದದ ಮುಖ್ಯ ಸಂಯೋಜಕರಾಗಿ (ಆಡಳಿತ) ಸೇವೆ ಸಲ್ಲಿಸಿರುತ್ತಾರೆ. (**A multidisciplinary project of Rs. 100 crores from MHRD and 50 crores from UGC for supporting advanced research**), ವಿಶ್ವವಿದ್ಯಾನಿಲಯದ ಇನ್‌ಫಾರ್ಮೇಷನ್ ಕಮ್ಯೂನಿಕೇಷನ್ ಡಿವಿಜನ್ (**ICD**)ನ ಸಂಯೋಜಕರಾಗಿ, 2008 ರಿಂದ ಮೈಸೂರು ವಿಶ್ವವಿದ್ಯಾನಿಲಯದ ಚೈನೀಸ್ ಕಾರ್ಯಕ್ರಮದ ಸಂಯೋಜಕರಾಗಿ, 2015 ರಿಂದ 2017 ರವರೆಗೆ ವಿಶ್ವವಿದ್ಯಾನಿಲಯದ ಅಂತಾರಾಷ್ಟ್ರೀಯ ಕೇಂದ್ರದ ನಿರ್ದೇಶಕರಾಗಿ, ಇ–ಗವರ್ನೆನ್ಸ್ (ರೂ. 05 ಕೋಟಿ ಯೋಜನೆ)ನ ಸಂಯೋಜಕರಾಗಿ, ಹೈ ಫರ್‌ಫಾರ್ಮೆನ್ಸ್ ಕಂಪ್ಯೂಟಿಂಗ್ (**HPC**) (ರೂ. 05 ಕೋಟಿ ಯೋಜನೆ)ನ ಸಂಯೋಜಕರಾಗಿ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ.

ಪ್ರೊ. ಜಿ. ಹೇಮಂತ ಕುಮಾರ್ ಅವರು ಮೈಸೂರಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಮಹಾರಾಜಾ ಶಿಕ್ಷಣ ಸಂಸ್ಥೆಯ ಸದಸ್ಯರಾಗಿ, ಮೈಸೂರಿನ ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ, ಮೈಸೂರಿನ ಶಾರದಾವಿಲಾಸ ಶಿಕ್ಷಣ ಸಂಸ್ಥೆಯ ಶಿಕ್ಷಣ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಾ ಬಂದಿದ್ದಾರೆ. ಯುವರಾಜ ಕಾಲೇಜು, ಮೈಸೂರು (ಸ್ವಾಯತ್ತ ಕಾಲೇಜು), ಜೆಎಸ್‌ಎಸ್ (ಸ್ವಾಯತ್ತ ಕಾಲೇಜು) ಹಾಗೂ ಸರ್ಕಾರಿ ಬಾಲಕರ ಕಾಲೇಜು, ಮಂಡ್ಯ ಇಲ್ಲಿನ ಶೈಕ್ಷಣಿಕ ಮಂಡಳಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಪ್ರೊ. ಜಿ. ಹೇಮಂತ ಕುಮಾರ್ ಅವರು ಶೈಕ್ಷಣಿಕ ವಿನಿಮಯ ಮತ್ತು ಸಂಶೋಧನ ಸಹಯೋಗದ ಅಂಗವಾಗಿ **Naples -Italy, Khartoum – Sudan, Moscow – Russia, Zhengzhou – Huanghuai University, China, Wuhan** ಇನ್ನು ಮುಂತಾದ ದೇಶಗಳಿಗೆ ಭೇಟಿ ನೀಡಿದ್ದಾರೆ.

**ಪ್ರಸ್ತುತ ಪ್ರೊ. ಜಿ. ಹೇಮಂತ ಕುಮಾರ್ ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದಾರೆ.**